## ಮಧ್ಯಂತರ ಅರ್ಜಿ  ನಂ. 4 ರ ಮೇಲೆ ಆದೇಶ

1. ಅರ್ಜಿದಾರ/ ವಾದಿ ಪರ ಪ್ರಸ್ತುತ ಅರ್ಜಿ ಸಲ್ಲಿಸಿ ಅರ್ಜಿಯಲ್ಲಿ ತಿಳಿಸಿದ ಆಸ್ತಿಗಳನ್ನು ದಾವಾಸ್ತಿಗಳು ಎಂದು ಸೇರ್ಪಡೆಗೊಳಿಸಿ ವಾದಪತ್ರ ತಿದ್ದುಪಡಿ ಮಾಡಲು ಅನುಮತಿ ನೀಡಬೇಕೆಂದು  ವಿನಂತಿಸಿರುತ್ತಾರೆ .

2. ಸದರಿ ಅರ್ಜಿ ಜೊತೆ ಲಗತ್ತಿಸಿದ ಪ್ರಮಾಣಪತ್ರದಲ್ಲಿ ದಾವೆಯನ್ನು ಕುಟುಂಬದ ಆಸ್ತಿಗಳಲ್ಲಿ ಪಾಲುವಾಟ್ನಿ ಸಲುವಾಗಿ ಸಲ್ಲಿಸಿದ್ದಿರುತ್ತದೆ. 4 ನೇ ಪ್ರತಿವಾದಿಯು ತನ್ನ ಪ್ರತಿವಾದಪತ್ರದಲ್ಲಿ ಅರ್ಜಿಯಲ್ಲಿ ತಿಳಿಸಿದ ಎರಡು ಜಮೀನುಗಳನ್ನು ದಾವೆಯಲ್ಲಿ ಸೇರಿಸಿಲ್ಲವೆಂದು ತಕರಾರನ್ನು ಸಲ್ಲಿಸಿದ್ದಿರುತ್ತದೆ. ಆದ್ದರಿಂದ ಸದರಿ ಆಸ್ತಿಗಳನ್ನು ಸಹ ಈ ದಾವೆಯಲ್ಲಿ ಸೇರಿಸಲು ಕಾರಣ ಉಂಟಾಗಿರುತ್ತದೆಂದು ತಿಳಿಸಿರುತ್ತಾರೆ. ಸದರಿ ಅರ್ಜಿಯಲ್ಲಿ ತಿಳಿಸಿದಂತೆ ತಿದ್ದುಪಡಿಗೆ ಅವಕಾಶ ನೀಡುವುದರಿಂದ ಪ್ರತಿವಾದಿಯರಿಗೆ ಯಾವುದೇ ಹಾನಿ ವ, ಲುಕ್ಸಾನು ಉಂಟಾಗುವುದಿಲ್ಲ. ಒಂದು ವೇಳೆ ಅರ್ಜಿಯಲ್ಲಿ ತಿಳಿಸಿದಂತೆ ತಿದ್ದುಪಡಿಗೆ ಅವಕಾಶ ನೀಡದಿದ್ದರೆ ಹಾಗೂ ವಾದಿಗೆ ತುಂಬಲಾರದ ಹಾನಿ ವ, ಲುಕ್ಸಾನು ಉಂಟಾಗುತ್ತದೆ. ಕಾರಣ ಅರ್ಜಿಯಲ್ಲಿ ತಿಳಿಸಿದಂತೆ ಆದೇಶಿಸಬೇಕೆಂದು ವಿನಂತಿಸಿರುತ್ತಾರೆ.

3. ಸದರಿ ಅರ್ಜಿಗೆ 24 ನೇ ಪ್ರತಿವಾದಿ ತಕರಾರು ಸಲ್ಲಿಸಿ ಈಗಾಗಲೇ ವಾದಿ ತನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರ ಸಲ್ಲಿಸಿದ್ದು, ಪಾಟೀಸವಾಲು ಹಂತ ಕೂಡಾ

ಮುಕ್ತಾಯಗೊಂಡಿರುತ್ತದೆ. ದಾವೆಯಲ್ಲಿ ಸೇರಿಸಬೇಕೆಂದು ತಿಳಿಸಿದ ಆಸ್ತಿ ಪೈಕಿ ಹಾರವಾಡ ಗ್ರಾಮದ ಜಮೀನು ಸ.ನಂ. 136/1 ಅ ಜಮೀನು ಎಷ್ಟು ಕ್ಷೇತ್ರ ಇದೆ ಎಂದು ಸ್ಪಷ್ಟಪಡಿಸಿರುವುದಿಲ್ಲ. ಕುಟುಂಬದ ಎಲ್ಲ ಆಸ್ತಿಗಳ ಕುರಿತು ಮಾಹಿತಿ ಇದ್ದರೂ ಸಹ ವಾದಿ ತನ್ನ ಪಾಲಿಗೆ ಬಂದಂತಹ ಆಸ್ತಿಯನ್ನು ಉದ್ದೇಶಪೂರ್ವಕವಾಗಿ ಈ ಮೊದಲು ತೋರಿಸದೇ ಈ ಹಂತದಲ್ಲಿ ಸಲ್ಲಿಸಿದ ಅರ್ಜಿ ದುರುದ್ದೇಶಪೂರಿತವಾಗಿರುತ್ತದೆ. ಕಾರಣ ಸದರಿ ವಾದಿಯ ಕ್ರಮ ನ್ಯಾಯಾಲಯದ ಅಮೂಲ್ಯ ಸಮಯ ಸಹ ಹಾಳಾಗುವ ನಿಟ್ಟಿನಲ್ಲಿ ಇರುತ್ತದೆಂದು ತಿಳಿಸಿ ಅರ್ಜಿಯನ್ನು ವಜಾಗೊಳಿಸಬೇಕೆಂದು ವಿನಂತಿಸಿರುತ್ತಾರೆ.

4. ಸದರಿ ಅರ್ಜಿ ಮೇಲೆ ಸುನಾವಣೆ ಆಲಿಸಿದ ನಂತರ ಈ ಕೆಳಗಿನ ಅಂಶಗಳು ಉದ್ಭವಿಸಿರುತ್ತವೆ...........

**ಅಂಶಗಳು**

1. ಮಧ್ಯಂತರ ಅರ್ಜಿಯಲ್ಲಿ ಕೇಳಿದ ಪರಿಹಾರ ಪಡೆಯಲು ವಾದಿ ಅರ್ಹನಿರುತ್ತಾನೆಯೇ?

2. ಯಾವ ಆದೇಶ ?

5. ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆಃ

ಅಂಶ ನಂ. 1: ಸಕಾರಾತ್ಮಕ

ಅಂಶ ನಂ. 2: ಅಂತಿಮ ಆದೇಶ

ಈ ಕೆಳಗೆ ನಮೂದಿಸಿದ ಕಾರಣಗಳಿಗಾಗಿ

## ಕಾರಣಗಳು

6. **ಅಂಶ ನಂ.1**:- ದಾವಾಸ್ತಿಗಳಲ್ಲಿ ಪಾಲುವಾಟ್ನಿ ಕೇಳಿ ವಾದಿ ಪ್ರಸ್ತುತ ದಾವೆ ಸಲ್ಲಿಸಿರುತ್ತಾರೆ. ದಾವೆಯಲ್ಲಿ ಡಿಡಬ್ಲ್ಯೂ-1 ರವರು ಪಾಟೀಸವಾಲಿಗಾಗಿ ನೇಮಿಸಿದಾಗ ಪ್ರಸ್ತುತ ಅರ್ಜಿ ಸಲ್ಲಿಸಲಾಗಿದೆ. ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ- 6 ನಿಯಮ -17 ರಡಿಯಲ್ಲಿ ದಾವೆಯಲ್ಲಿರುವ ವಿವಾಧ್ಯದ ಸಂಗತಿಗಳನ್ನು ನಿರ್ಧರಿಸುವ ಉದ್ದೇಶಕ್ಕಾಗಿ ಅವಶ್ಯವಾದ ಎಲ್ಲ ದುರಸ್ತಗಳನ್ನು ಮಾಡಲು ದಾವೆಯ ಪಕ್ಷಗಾರರಿಗೆ ಯಾವುದೇ ಹಂತದಲ್ಲಿ ಅವಕಾಶ ನೀಡಬೇಕು. ಆದರೆ ಅಂತಹ ತಿದ್ದುಪಡಿ ಅಧಿವಿಚಾರಣೆ ಪ್ರಾರಂಭವಾದ ನಂತರ ತಿದ್ದುಪಡಿಗಾಗಿ ಅರ್ಜಿ ಸಲ್ಲಿಸಿದ್ದರೆ ಈ ಮೊದಲು ಯುಕ್ತ ಎಚ್ಚರಿಕೆ ವಹಿಸಿದಾಗ್ಯೂ ಸಹ ಅಧಿವಿಚಾರಣೆ ಪ್ರಾರಂಭದ ಪೂರ್ವದಲ್ಲಿ ಪಕ್ಷಗಾರರು ಸದರಿ ವಿಷಯದ ಕುರಿತು ವಾದಿಸಲು ಆಗುತ್ತಿರಲಿಲ್ಲ ಎಂಬುವುದನ್ನು ಪರಿಗಣಿಸಬೇಕಾಗುತ್ತದೆ.

7. ಸದರಿ ನಿಯಮದ ಉದ್ದೇಶ ನ್ಯಾಯದ ವಿಫಲತೆಯನ್ನು ತಡೆದು ಪರಿಣಾಮಕಾರಿಯಾಗಿ ನ್ಯಾಯನಿರ್ಣಯವನ್ನು ಮಾಡುವುದಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅರ್ಜಿಗಳಲ್ಲಿನ ಸಂಗತಿಗಳನ್ನು ಅವಲೋಕಿಸಿದಾಗ 24 ನೇ ಪ್ರತಿವಾದಿ ತನ್ನ ಪ್ರತಿವಾದಪತ್ರದಲ್ಲಿ ಪ್ರಸ್ತುತ ಅರ್ಜಿಯಲ್ಲಿ ತಿಳಿಸಿದ ಆಸ್ತಿಗಳ ಕುರಿತು ತಿಳಿಸಿರುತ್ತಾರೆ ಎಂದು ವಾದಿ ಸ್ಪಷ್ಟವಾಗಿ ತಿಳಿಸಿರುತ್ತಾರೆ. ಆದರೆ ಸದರಿ ಪ್ರತಿವಾದಪತ್ರದ ಸಂಗತಿ ತಿಳಿದ ತಕ್ಷಣ ಅರ್ಜಿಯಲ್ಲಿ ತಿಳಿಸಿದ ಆಸ್ತಿಗಳನ್ನು ದಾವೆಯಲ್ಲಿ ಯಾವ

ಕಾರಣಕ್ಕಾಗಿ ಸೇರ್ಪಡಿಸಲಿಲ್ಲ ಎಂಬುವುದರ ಕುರಿತು ಸಮಂಜಸವಾದ ಹೇಳಿಕೆ ವಾದಿಯ ಪ್ರಮಾಣಪತ್ರದಿಂದ ಕಂಡುಬರುವುದಿಲ್ಲ. ಆದರೆ ಸದರಿ ನಿಯಮದ ಕೆಳಗೆ ಸಲ್ಲಿಸುವ ಅರ್ಜಿಗಳು ನ್ಯಾಯದ ವಿಫಲತೆಯನ್ನು ತಡೆದು ಪಕ್ಷಗಾರರ ನಡುವೆ ಇರುವ ವಿವಾಧ್ಯವನ್ನು ಪರಿಣಾಮಕಾರಿಯಾಗಿ ನಿರ್ಧರಿಸುವಲ್ಲಿ ಬೇಕಾದ ಸಂಗತಿಯ ಕುರಿತು ತಿದ್ದುಪಡಿ ಕೇಳಿದಾಗ ಅದನ್ನು ಪರಿಗಣಿಸಲು ಅವಕಾಶವಿರುತ್ತದೆ.

8. ಅದು ಅಲ್ಲದೆ ದಾವೆ ಪಾಲುವಾಟ್ನೆ ಸಲುವಾಗಿರುವುದರಿಂದ ಎಲ್ಲ ಹಿಸ್ಸೆದಾರರು ಅವಶ್ಯಕ ಪಕ್ಷಗಾರರಾಗಿರುತ್ತಾರೆ ಹಾಗೂ ಕುಟುಂಬದ ಎಲ್ಲ ಆಸ್ತಿಗಳ ಕುರಿತು ನ್ಯಾಯ ನಿರ್ಧರಣೆಯಾಗಬೇಕಾಗುತ್ತದೆ. ಕಾರಣ ಅರ್ಜಿಯನ್ನು ಕೇವಲ ತಡವಾಗಿ ಸಲ್ಲಿಸಿರುತ್ತಾರೆ ಎಂಬುವ ಕಾರಣಕ್ಕೆ ನ್ಯಾಯನಿರ್ವಹಣೆಯಲ್ಲಿ ಕೈಗೊಳ್ಳಬೇಕಾದ ಪ್ರಮುಖ ಸಂಗತಿಗಳ ಕೊರತೆಯನ್ನು ತಪ್ಪಿಸಲು ಸಲ್ಲಿಸಿದ ಅರ್ಜಿಯನ್ನು ಖರ್ಚು ಸಹಿತ ಪುರಸ್ಕರಿಸುವುದರಿಂದ ಪ್ರತಿವಾದಿಯ ಹಿತವನ್ನು ಸಹ ಕಾಯ್ದುಂತಾಗುತ್ತದೆ. ಕಾರಣ ಅಂಶ ನಂ. 1 ಕ್ಕೆ " **ಸಕಾರಾತ್ಮಕ**" ಎಂದು ಉತ್ತರಿಸಿದ್ದೇನೆ.

9. **ಅಂಶ ನಂ. 2**:- ಮೇಲೆ ಚರ್ಚಿಸಿದ್ದರ ಅನುಗುಣವಾಗಿ, ಈ ಕೆಳಗಿನಂತೆ....

**ಆದೇಶ**

ದಿಃ 11-09-2023 ರಂದು ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ರೂ. 300/- ಖರ್ಚಿನ ಮೇರೆಗೆ ಪುರಸ್ಕರಿಸಲಾಗಿದೆ.

ವಾದಪತ್ರದ ತಿದ್ದುಪಡಿಗಾಗಿ ಪ್ರಕರಣವನ್ನು

ದಿಃ 12-10-2023 ರಂದು ಕರೆಯಿರಿ .

Sd/-

**ಸಿವಿಲ್ ನ್ಯಾಯಾಧೀಶರು, ಅಂಕೋಲಾ.**